O.S. 230/2018 PW-1

ದಿನಾಂಕಃ 23.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಸದರಿ ದಾವೆಯನ್ನು ನನ್ನ ತಂದೆಯವರು ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ದಾವೆಯಲ್ಲಿನ ಪ್ರರ್ಥನೆಯ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದೇನೆ. ಕಾಲುವೆಯನ್ನು ಮುಚ್ಚಿ ಹಕಿರುವ ಕಾರಣ ದಾವೆಯನ್ನು ಹೂಡಿರುತ್ತೇವೆ. ದಾವಾ ಸ್ವತ್ತಿನ ಮೂಲ ಸರ್ವೆ ನಂ. ನನಗೆ ಗೊತ್ತಿಲ್ಲ. ನಿಪಿ-1 ರಂತೆ ನಾವು ಮತ್ತು ಇತರರು ನಮ್ಮ ಪಾಲಿಗೆ ಬಂದಂತಹ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ಸರ್ವೆ ನಂ.2/3 ರಲ್ಲಿ ಬಾವಿ ಇದೆ. ಸರ್ವೆ ನಂ.2/3 ಮುದ್ದಲಿಂಗಮ್ಮನವರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಮುದ್ದಲಿಂಗಮ್ಮನವರನ್ನು ಈ ದಾವೆಯಲ್ಲಿಪಕ್ಷದಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.2/3 ಮತ್ತು 2/4 ಬೇರೆ ಜಮೀನುಗಳು ಎಂದರೆ ಸರಿ. ನಮಗೆ ಸರ್ವೆ ನಂ.2/3 ರಿಂದ ನೀರು ಬರಬೇಕು ಎಂದರೆ ಸರಿ. ಪ್ರತಿವಾದಿಗಳು ಸರ್ವೆ ನಂ.2/3 ರಲ್ಲಿರುವ ಬಾವಿಯ ನೀರಿನ ಮೇಲೆ ಹಕ್ಕು ಇಲ್ಲ ಎಂದು ನುಡಿದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಕಾಲುವೆಯ ನೀರಿನ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.2/3 ಮತ್ತು 2/4 ದಕ್ಷಿಣದ ದಿಕ್ಕಿನಲ್ಲಿದೆ ಎಂದರೆ ಸರಿ. ಪ್ರತಿವಾದಿಗಳು ಅವರ ಜಮೀನಿನಲ್ಲೇ ಶೆಡ್ ಅನ್ನು ಕಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ನಮಗೆ ನೀರು ಬರಲು ತೊಂದರೆಯಾಗುತ್ತಿದೆ ಎಂದು ನುಡಿದಿರುತ್ತಾರೆ. ಮೂರು ಜಮೀನುಗಳು ಸಮನಾಗಿವೆ ಎಂದರೆ ಸರಿ. ಪ್ರತಿವಾದಿಗಳು ಸುಮಾರು 5-6 ವರ್ಷಗಳ ಹಿಂದೆ ಶೆಡ್ ಅನ್ನು ಕಟ್ಟಿದ್ದಾರೆ. ನಾನು ಆ ಕುರಿತಾಗಿ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿ. ಪ್ರತಿವಾದಿಗಳು ಅವರದೇ ಆದ ಜಮೀನಿನಲ್ಲಿ ಶೆಡ್ ಅನ್ನು ಕಟ್ಟಿಕೊಂಡು ನಮಗೆ ಯಾವುದೇ ಕಾಲುವೆಗೆ ಅಡ್ಡಿ ಬರದಂತೆ ವಾಸವಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ನಮ್ಮ ನಡುವೆ ಗಲಾಟೆಯಾದ ಬಗ್ಗೆ ನಾನು ಯಾವುದೇ ದಾಖಲಾತಿ ನೀಡಿಲ್ಲ ಎಂದರೆ ಸರಿ. ನಿಪಿ-1 ಅನ್ನು 2005 ರಲ್ಲಿ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.